**ಸಾಕ್ಷಿಯನ್ನು ದಿನಾಂಕ: 10-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು 9 ನೇ ಪ್ರತಿವಾದಿ ಪರ ವಕೀಲರಾದ ಶ್ರೀ MH ರವರಿಂದ**

**1.** ದುರ್ಗಪ್ಪ ರವರ ಹೆಸರಿಗೆ ಹಳೆ ಸರ್ವೆ ನಂ. 11 ಹೊಸ ಸರ್ವೆ ನಂ. 42 ಕ್ರಯವಾಗಿದ್ದು ಸದರಿ ಆಸ್ತಿಗೆ ಕ್ರಯವಾಗಿದ್ದು ಅವರು ವಾರಸುದಾರರು 9 ನೇ ಪ್ರತಿವಾದಿ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯನ್ನು ಸರ್ವೆ ನಂ. 42 ವಿಸ್ತೀರ್ಣ 2 ಎಕರೆ 20 ಗುಂಟೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ಸರ್ಕಾರಿ ಹಳ್ಳ, ಪಶ್ಚಿಮಕ್ಕೆ ಚಿನ್ನನರಸಪ್ಪನವರ ಜಮೀನು, ಉತ್ತರಕ್ಕೆ ಕೆಂಜಿಗಪ್ಪನವರ ಜಮೀನು, ದಕ್ಷಿಣಕ್ಕೆ ಹನಮಂತಯ್ಯನವರ ಜಮೀನು ಬರುತ್ತದೆ. ದುರ್ಗಪ್ಪ ಹೆಸರಿಗೆ ಸರ್ವೆ ನಂ. 42 ಕ್ಕೆ ಸಂಬಂಧಿಸಿದಂತೆ 1972 ರಲ್ಲಿ ಕ್ರಯ ಪತ್ರವಾಗಿರುತ್ತದೆ. ಸದರಿ ಕ್ರಯ ಪತ್ರದಲ್ಲೂ ದಾವಾ ಷಡ್ಯೂಲ್ ನಲ್ಲಿ ಕಾಣಿಸಿರುವ ಚೆಕ್ಕುಬಂದಿಯನ್ನು ಕಾಣಿಸಿರುತ್ತಾರೆ. ದುರ್ಗಪ್ಪನವರ ಹೆಸರಿಗಾದ ಕ್ರಯ ಪತ್ರಕ್ಕೆ ಸಿದ್ದ ವೀರಯ್ಯ ನವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ದುರ್ಗಪ್ಪನವರ ಹೆಸರಿಗಾದ ಕ್ರಯ ಪತ್ರವನ್ನು ನಾನು ನೋಡಿದ್ದು, ಸದರಿ ದಾಖಲೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ.

2. ಸರ್ವೆ ನಂ. 11 ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಹಾಗೂ ಎಷ್ಟು ಪೊಡುಗಳಾಗಿರುತ್ತದೆಂದು ನನಗೆ ಗೊತ್ತಿಲ್ಲ. ಸರ್ವೆ ನಂ.11, 42 ಮತ್ತು 43 ಬೇರೆ ಬೇರೆ ಪೊಡುಗಳು ಎಂದರೆ ಸರಿ. ಸರ್ವೆ ನಂ. 11 ಪೊಡಾಗಿರುವ ಬಗ್ಗೆ ನಾನು ಸರ್ವೆ ದಾಖಲೆಗಳನ್ನು ನೋಡಿರುತ್ತೇನೆ. ಸರ್ವೆ ನಂ. 42 ರಲ್ಲಿ 1 ಎಕರೆ 34 ಗುಂಟೆ ವಿಸ್ತೀರ್ಣವು ಕೆಂಜಿಗಪ್ಪನವರ ಹೆಸರಿಗೆ MR No. 1/1989-90 ರಂತೆ ಖಾತೆ ಆಗಿರುತ್ತದೆಂದರೆ ಸರಿ. ಕೆಂಜಿಗಪ್ಪನವರು ಸುಮಾರು 20-25 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ಸರ್ವೆ ನಂ. 42 ಪೊಡಾಗಿ ಸರ್ವೆ ನಂ. 42/1 ಮತ್ತು 42/2 ಆಗಿರುತ್ತದೆಂದರೆ ಸರಿ. ಸರ್ವೆ ನಂ. 42/1 ರಲ್ಲಿ 1 ಎಕರೆ 34 ಗುಂಟೆ ವಿಸ್ತೀರ್ಣ ಇರುತ್ತದೆಂದರೆ ಸರಿ. ಕೆಂಜಿಗಪ್ಪನವರು ಮೃತ ಪಟ್ಟನಂತರ ಸಶವೆ ನಂ. 42/1 ರ ಲ್ಲಿ 1 ಎಕರೆ 34 ಗುಂಟೆ ವಿಸ್ತೀರ್ಣ ಖಾತೆಯು MR No. 9/1998-99 ರಂತೆ ಅವರ ವಾರಸುದಾರರಿಗೆ ಖಾತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಂತರ 1 ನೇ ಪ್ರತಿವಾದಿ ಅವರ ಕುಟುಂಬದವರು ಸದರಿ ಆಸ್ತಿಯನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಕ್ರಯ ಪತ್ರದ ಆಧಾರದ ಮೇಲೆ 9 ನೇ ಪ್ರತಿವಾದಿ ಹೆಸರಿಗೆ MR No. 3/1999-2000 ರಂತೆ ಖಾತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಖಾತೆ ಆದಾಗಿನಿಂದಲೂ ಸರ್ವೆ ನಂ. 42/1 ರ 1 ಎಕರೆ 34 ಗುಂಟೆ ವಿಸ್ತೀರ್ಣ ದಲ್ಲಿ 9 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಸದರಿ ಸರ್ವೆ ನಂ. 9 ನೇ ಪ್ರತಿವಾದಿ ಬೋರ್ ವೆಲ್ ನ್ನು ಕೊರೆಸಿ, ಅಡಿಕೆ ಬೆಳೆ ಇಟ್ಟುಕೊಂಡು ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆಯು 9 ನೇ ಪ್ರತಿವಾದಿ ಹೆಸರಿಗೆ ಬರುತ್ತಿರುತ್ತದೆಂದರೆ ಸರಿಯಲ್ಲ. ಸದರಿ ಸರ್ವೆ ನಂಬರ ಬ್ಯಾಂಕುಗಳಲ್ಲಿ ಅಡಮಾನ ಮಾಡಿ 9 ನೇ ಪ್ರತಿವಾದಿ ಸಾಲವನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ದುರ್ಗಪ್ಪನವರು ಕ್ರಯಕ್ಕೆ ಪಡೆದಿರುವ ಸರ್ವೆ ನಂಬರ್ ಹಾಗೂ ಕೆಂಜಿಂಗಪ್ಪನವರು ಕ್ರಯಕ್ಕೆ ಪಡೆದಿರುವ ಜಮೀನಿನ ಚೆಕ್ಕುಬಂದಿ ಬೇರೆ ಬೇರೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನಾನೇ ಹೇಳಿ ಬರೆಸಿರುತ್ತೇನೆ. ವಾದಿಗಳು ದಾವಾ ಆಸ್ತಿಯಲ್ಲಿ ಸ್ವಾದೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದುರ್ಗಪ್ಪನಿಗೆ 6 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳಿದ್ದು ಅವರ ಹೆಸರುಗಳು ನನಗೆ ಗೊತ್ತಿಲ್ಲ. ದುರ್ಗಪ್ಪನ ಎಲ್ಲಾ ಮಕ್ಕಳು ಈ ಕೇಸಿನಲ್ಲಿ ಪಕ್ಷಗಾರರಾಗಿರುತ್ತಾರೆ. ನನಗೆ ದಾವಾ ಆಸ್ತಿ ಹಾಗೂ ದುರ್ಗಪ್ಪನ ಕುಟುಂಬಕ್ಕೆ ಸಂಬಂಧಿಸಿದಂತೆ ಏನೂ ಮಾಹಿತಿ ಇಲ್ಲದೇ ಇದ್ದರೂ ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀಸವಾಲು 10 ನೇ ಪ್ರತಿವಾದಿ ಕಾನೂನು ಬದ್ಧ ವಾರಸುದಾರರ ಪರ ವಕೀಲರಾದ ಶ್ರೀ HRR ರವರಿಂದ</u>**

1. ಈ ದಾವೆಯನ್ನು ಸರ್ವೆ ನಂ. 42 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ, ಬೇರೆ ಯಾವ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ. 42 ರಲ್ಲಿ ದುರ್ಗಪ್ಪನವರ ಕುಟುಂಬದವರು ಸ್ವಾದೀನದಲ್ಲಿರುತ್ತಾರೆ ಬೇರೆ ಯಾರು ಸ್ವಾದೀನದಲ್ಲಿ ಇರುವುದಿಲ್ಲ. ದಿನಾಂಕ 28-04-2004 ರಂದು ಹನುಮಯ್ಯ ಬಿನ್. ಹನುಮಂತಯ್ಯ ರವರು ಸರ್ವೆ ನಂ. 42 /2 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ಚೆಕ್ಕುಬಂದಿ ಪೂರ್ವಕ್ಕೆ ಹಳ್ಳ ಮತ್ತು ಪುಟ್ಟಬಾಳಯ್ಯ ಹಾಗೂ ಅಶ್ವಥಪ್ಪರವರ ಜಮೀನು, ಪಶ್ಚಿಮಕ್ಕೆ ರಸ್ತೆ ಸಿ, ಉತ್ತರಕ್ಕೆ ತಿಮ್ಮಲಕ್ಷ್ಮಮ್ಮ ರವರ ಜಮೀನು ಮತ್ತು ವೆಂಕರಾಮರವರ ಜಮೀನು, ದಕ್ಷಿಣಕ್ಕೆ ಸಿದ್ದ ಹನಮಯ್ಯ ಮತ್ತು ನಾರಾಯಣಪ್ಪ ರವರ ಜಮೀನು ಬರುತ್ತದೆಂದರೆ ಸರಿಯಲ್ಲ. ಕ್ರಯ ಪತ್ರದ ಅದ ,ಾರದ ಮೇಲೆ 10 ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು ತದನಂತರ 10 ನೇ ಪ್ರತಿವಾದಿಯು ಸದರಿ ಆಸ್ತಿ ಗೆ ಸಂಬಂಧಿಸಿದಂತೆ ಅವರ ಮಕ್ಕಳಾದ ಎ ಹೆಚ್ ಜಗದೀಶ ಮತ್ತು ಗಂಗರಾಜು ರವರ ಹೆಸರಿಗೆ ದಿನಾಂಕ 12-07-2013 ರಂತೆ ನೊಂದಾಯಿತ ದಾನ ಪತ್ರವನ್ನು

ಬರೆದಕೊಟ್ಟಿರುತ್ತಾರೆಂದರೆಸ ರಿಯಲ್ಲ. ದಾನ ಪತ್ರದ ಆಧಾರದ ಮೇಲೆ ಜಗದೀಶ ಮತ್ತು ಗಂಗಾಧರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಪ್ರಸ್ತುತ ಗಂಗರಾಜು ಮತ್ತು ಜಗದೀಶ ರವರು ಸ್ವಾಧೀನದಲಿರುತ್ತಾರೆಂದರೆ ಸರಿಯಲ್ಲ. ವಾದಿಗಳು ಹಂಚಿಹಳ್ಳಿ ಗ್ರಾಮದಿಂದ ನಮ್ಮ ಗ್ರಾಮಕ್ಕೆ ಸುಮಾರು 20 ಕಿ.ಮೀ ಅಂತರವಾಗುತ್ತದೆ. ದಾವಾ ಆಸ್ತಿಗಳಲ್ಲಿ ವಾದಿಗಳು ಸಾವದೀನದಲ್ಲಿ ಇಲ್ಲದೇ ಇದ್ದರೂ ನಾನು ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**